Sri G. DUGGAPPA.—Will the Government call for any periodical reports from the Unit Officers?

ಶ್ರೀ ಕಡಿದಾಳ್ ಮಂಜಪ್ಪ.—ಪಬ್ಲಿಕ್ ಸರ್ವಿಸ್ ಕಮೀಷನ್ನಿಗೆ ಈ ಬಗ್ಗೆ ವರದಿಗಳು ಬರುತ್ತವೆ. ಅದಕ್ಕೋಸ್ಕರವೇ ಒಂದು ವರ್ಷ ಆದನಂತರ ಅಂಕಿ ಅಂಶಗಳನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆಂದು ಹೇಳಿದ್ದು.

Sri K. PRABHAKAR.—May I know the officers to whom the returns of the Ministers' Establishments would be sent, Sir?

ಶ್ರೀ ಕಡಿದಾಳ್ ಮಂಜಪ್ಪ.—ಪರಿಶಿಷ್ಟವನ್ನು ನೋಡಿ!

Appointment of Officials (implementation of Government Order requiring representation of all Communities.)

Q.—91. Sri H. K. SIDDAIYA (Belur-Scheduled Castes).—

Will the Government be pleased to state :—

(*a*) whether there is a Government Order requiring the representation of all communities while appointing officials in each office;

(*b*) whether effect has been given to that Order in all offices?

A.—Sri Kadidal MANJAPPA (Minister for Revenue and Public Works).—

(*a*) Government Order No. G. 4227-8—G M. 103-33-1, dated 20th December 1933 wherein Government impressed on all appointing officers the need for a fair admixture of different communities when appointments are made.

(*b*) This order is being given effect to while filling up vacancies that arise in each office according to the ratio of 3 Special to 1 General. The Government Order of 1934 and subsequent orders laying down the revised rules of recruitment have repeatedly laid stress on the principle of giving representation in Government services in all units to all the communities specially to the Backward and unrepresented communities.

Due reservation has also been made in Government Order of August 1953 to the extent of 16 2/3 per cent of all direct recruitment vacancies to Scheduled Castes and Scheduled Tribes.

ಶ್ರೀ ಎಚ್. ಕೆ. ಸಿದ್ದಯ್ಯ.—ಹಿಂದುಳಿದ ಪಂಗಡದವರಿಗೆ ಶೇಕಡ 16⅔ರಷ್ಟು ಮೀಸಲಾಗಿಟ್ಟಿದ್ದೇವೆಂದು ಹೇಳಿದಿರಿ. ಈ ಆಜ್ಞೆ ಸಮರ್ಪಕವಾಗಿಲ್ಲವೆಂದು ಹೇಳಿದರೆ ತಾವು ಒಪ್ಪುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಹೇಗೆ ಒಪ್ಪುವುದಕ್ಕಾಗುತ್ತದೆ?

Mr. SPEAKER.—It is a matter of opinion.

ಶ್ರೀ ಎಂ. ಮಾದಯ್ಯ.—ತಾವು ಯೂನಿಟ್ ಆಫೀಸರುಗಳಿಗೆ instructions ಕೊಟ್ಟಿರುವುದಾಗಿ ಹೇಳಿದಿರಿ. ಅವರು ಶೇಕಡಾವಾರು ಪ್ರಕಾರ ಎಷ್ಟೆಷ್ಟು ಜನರನ್ನು ನೇಮಿಸಿಕೊಂಡಿದ್ದಾರೆಂಬ ಬಗ್ಗೆ periodical report ಕಳುಹಿಸುತ್ತಾರೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಆಗಲೇ ಹೇಳಿದ್ದೇನೆ.

ಶ್ರೀ ಎಂ. ಮಾದಯ್ಯ.—ತಾವು ಡಿಪ್ರೆಸ್ಡ್ ಕ್ಲಾಸ್ ಮತ್ತು ಇತರ ಎಲ್ಲಾ ಕೋಮಿನವರಿಗೂ 1 : 3 ದಾಮಾಷಾದಲ್ಲಿ ಹುದ್ದೆಗಳನ್ನು ಕೊಡುವಂತೆ ಆರ್ಡರ್ ಮಾಡಿದ್ದೇವೆ, ಆದರಂತೆ ಕೊಡುತ್ತಿದ್ದಾರೆಂದು ಹೇಳಿದ್ದೀರಿ. ಅದಲ್ಲದೆ, ಈ ಆರ್ಡರಿನ ಪ್ರಕಾರ ಶೇಕಡ 16⅔ ರಿನರ್ವೇಷ್ಟ ಇರಬೇಕೆಂದು ಹೇಳಿದೆಯಲ್ಲಾ, ಇದನ್ನೆಲ್ಲಾ ಲೆಕ್ಕ ಹಾಕುವಾಗ, total number of appointments ಮೇಲೆ ಲೆಕ್ಕ ಹಾಕುತ್ತಾರೆಯೇ ಅಥವಾ 1 : 3 ಎಂದು backward ಕ್ಲಾಸ್‌ಗೆ ಕೊಟ್ಟಿರುವುದರಮೇಲೆ ಲೆಕ್ಕ ಹಾಕುತ್ತಾರೆಯೇ?

Sri Kadidal MANJAPPA.—Out of every 12 vacancies available, 3 shall be regarded as 'A' or general, 7 as 'B' or special and the remaining two as 'C' or reserved.

ಶ್ರೀ ಎಂ. ಮಾದಯ್ಯ.—ಎರಡು ಎನ್ನುವುದನ್ನು total number ಮೇಲೆ calculate ಮಾಡುತ್ತೀರೋ?

ಶ್ರೀ ಕಡಿದಾಳ್ ಮಂಜಪ್ಪ.—ಇವರಿಗೆ 16⅔ ಭಾಗ ಬರುವಂತೆ P. S. C. ಯವರು calculate ಮಾಡಿದ್ದಾರೆ.

ಶ್ರೀ ಎಂ. ಮಾದಯ್ಯ.—16⅔ ಭಾಗ ಎಂದು ಗೊತ್ತುಮಾಡಿದ್ದು ಯಾವ ಆಧಾರದ ಮೇಲೆ?

Sri Kadidal MANJAPPA.—On the basis of the population.

ಶ್ರೀ ಎಂ. ಮಾದಯ್ಯ.—ಈಗ Depressed Class ನವರ ಜನಸಂಖ್ಯೆ ಶೇಕಡ 20 ಇದೆಯೆಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಆ ವಿಚಾರವೂ ಸರ್ಕಾರದ ಪರ್ಯಾಲೋಚನೆಯಲ್ಲಿದೆ.

ಶ್ರೀ ಎಂ. ಮಾದಯ್ಯ.—ಪಬ್ಲಿಕ್ ಸರ್ವಿಸ್ ಕಮೀಷನ್ನಿನವರು inadequate ಪ್ರಾತಿನಿಧ್ಯವಿಳ್ಳ ಮತ್ತು unrepresented ಆಗಿರತಕ್ಕ ಕೋಮಿನವರಿಗೂ ಒಂದು ಶೇಕಡ ಭಾಗವನ್ನು ನಿಗದಿ ಮಾಡಬೇಕೆಂದು ಹೇಳಿದ ಶಿಫಾರಸು ಪರ್ಯಾಲೋಚನೆಯಲ್ಲಿದೆಯೆಂದು ಅಸೆಂಬ್ಲಿಯಲ್ಲಿ ಹೇಳಿದ್ದಿರಲ್ಲಾ, ಅದರ ಬಗ್ಗೆ ಏನಾದರೂ ಮಾಡಿದ್ದೀರಾ?

ಶ್ರೀ ಕಡಿದಾಳ್ ಮಂಜಪ್ಪ.—Backward Classes Commissionನ್ನಿನವರ ವರದಿಯನ್ನು ನಿರೀಕ್ಷಿಸುತ್ತಿದ್ದೇವೆ.

12-30 P.M.

ಶ್ರೀ ಎಂ. ಮಾದಯ್ಯ.—ಕಾರ್ಪಸ್ಟಿಟ್ಯೂಷನ್ನಿನಲ್ಲಿ ಇವರಿಗೆ ಎಲ್ಲಾ ಭಾಗದಲ್ಲಿಯೂ ಹೆಚ್ಚಿನ ರಿಯಾಯಿತಿ ಗಳನ್ನು ತೋರಿಸಿ, ಇನ್ನು ಕೆಲವು ವರ್ಷಗಳೊಳಗಾಗಿ ಇವರನ್ನು ಇತರ ಕೋಮಿನವರ ಮಟ್ಟಕ್ಕೆ ತರಬೇಕೆಂದು ಒತ್ತಿ ಹೇಳಿದ್ದಾಗ್ಗೂ ಈ ವಿಚಾರಕ್ಕೆ ಸಾಕಷ್ಟು ಗಮನ ಕೊಡವೆ, ನಮಗೆ ನಿಜವೇಕಾದ ಪ್ರಾತಿನಿಧ್ಯ ಸರಿಯಾಗಿ ನಿಲ್ಲವೆ ಕುರಿತಾ ಅನ್ಯಾಯವಾಗುತ್ತಿದೆಯೆಂಬ ಅಂಶ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಅಂಥಾದ್ದು ಯಾವುದೂ ನನ್ನ ಗಮನಕ್ಕೆ ಬಾರದಿದ್ದಾಗ್ಗೂ ಕೂಡ ಯಾರುಯಾರಿಗೆ ಈ ನೌಕರಿಗಳಲ್ಲಿ ಸಾಕಷ್ಟು ಪ್ರಾತಿನಿಧ್ಯ ಸಿಕ್ಕಿಲ್ಲವೋ ಮತ್ತು ಯಾರುಯಾರು ಅನ್‌ರೆಪ್ರೆಸೆಂಟೆಡ್ ಕೋಮು ಗಳವರಿದ್ದಾರೋ ಅಂಥವರನ್ನು ಮೊದಲು ನೋಡಿ ಕೊಂಡು ಉಳಿದವರಿಗೆ ಅವಕಾಶ ಕೊಡಬೇಕೆಂದು ಯೂನಿಟ್ ಆಫೀಸರುಗಳಿಗೆ ಖಚಿತವಾದ ತಿಳಿವಳಿಕೆ ಗಳನ್ನು ಕೊಡಲಾಗಿದೆ.

ಶ್ರೀ ಎಂ. ಮಾದಯ್ಯ.—ಈ ಹಿಂದೆ ಈ ಹುಕ್ಕುಂ ಬಾರದಿದ್ದಾಗ ಈ ಕೋಮುಗಳ ಅಭಿವೃದ್ಧಿ ಯಾವ ಮಟ್ಟದಲ್ಲಿತ್ತು, ಈ ಹೊಸ ಆಜ್ಞೆ ಬಂದನಂತರ ಅದು ಯಾವ ಮಟ್ಟಕ್ಕೆ ಬಂದಿವೆ ಎಂಬುದನ್ನು ತಾಳೆ ಹಾಕಲು ತಾವು ಈ ಎರಡು ತಃಖ್ತೆಗಳನ್ನು ತಯಾರು ಮಾಡಿಸುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—P. S. C. ಅವರ ವರದಿ ತಮ್ಮ ಕೈಲೇ ಇದೆ. ಅದನ್ನು ತಾವು ನೋಡಿದರೆ ತಮಗೆ ಎಲ್ಲ ವಿಷಯಗಳೂ ಗೊತ್ತಾಗುತ್ತವೆ.

ಶ್ರೀ ಎಂ. ಮಾದಯ್ಯ.—ಡಿಸ್ಟ್ರಿಕ್ಟ್ ಕ್ಲಾಸಿಗೆ ದೊರೆಯಬೇಕಾಗಿದ್ದ ಲೆಕ್ಕಾಚಾರದ ಪ್ರಕಾರ 17 ಸ್ಥಾನಗಳೀಗ ಅವರಿಗೆ ಕಳೆದುಹೋಗಿವೆ. ಅದನ್ನು ಸರಿಪಡಿಸಲು ತಾವೇನು ಈಗ ಕಾರ್ಯಕ್ರಮ ಕೈಗೊಂಡಿದ್ದೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ನೇರವಾಗಿ ಜನರನ್ನು ಸರ್ಕಾರಿ ಕೆಲಸಕ್ಕೆ ಭರ್ತಿಮಾಡಿಕೊಳ್ಳುವಾಗ ನಿಮ್ಮ ಪಂಗಡದವರಿಗೆ ಸಾಕಷ್ಟು ಪ್ರಾತಿನಿಧ್ಯ ಕೊಟ್ಟು ಉಳಿದುವನ್ನು ಬಾಕಿಯವರಿಗೆ ಹಂಚಬೇಕೆಂಬುದು ಸರ್ಕಾರದವರ ನೀತಿಯಾಗಿದೆ.

ಶ್ರೀ ಎಂ. ಮಾದಯ್ಯ.—ಈ ಬಗ್ಗೆ ಸರ್ಕಾರದವರು ಏನು ಮಾಡಿದ್ದೀರಿ ?

Mr. SPEAKER.—You have put sufficient number of questions.

Sri M. MADIAH.—This is an important question relating to appointments.

Mr. SPEAKER.—This question is being answered continuously. There are also other questions to be taken up.

Sri M. MADIAH.—May I know whether the Government have paid sufficient and adequate attention to the provisions of the Constitution in order to carry out the spirit of the Constitution ?

Sri Kadidal MANJAPPA.—We are doin it.

ಶ್ರೀ ಬಿ. ಹುಚ್ಚೇಗೌಡ.—ಕಳೆದ ವರ್ಷ ಇದೇ ಶ್ರೀ ಎಂ. ಮಾದಯ್ಯನವರು ಇದೇ ಸಭೆಯಲ್ಲಿ ಒಂದು ನಿರ್ಣಯವನ್ನು ತಂದು—ಆಯಾ ಕೋಮಿನ ಜನ ಗಣತಿಗನುಗುಣವಾಗಿ ನೌಕರಿಗಳನ್ನು ಹಂಚಬೇಕೆಂದು ಆ ನಿರ್ಣಯವನ್ನು ಪಾಸ್‌ಮಾಡಿಸಿದ್ದು ತಮ್ಮ ಗಮನದಲ್ಲಿಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಈ ಭಾಗದಲ್ಲಿ ಯಾವ ರೀತಿ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂಬ ಬಗ್ಗೆ ಒಂದು ನಲಹೆಯನ್ನು ಕಳುಹಿಸಿಕೊಡಬೇಕೆಂದು P. S. C. ಅವರಿಗೆ ಆ ನಿರ್ಣಯವನ್ನು ಕಳುಹಿಸಿ ಕೊಡಲಾಗಿದೆ. ಆದರೆ ಏತನ್ಮಧ್ಯೆ ಕೇಂದ್ರದಲ್ಲಿ ಏರ್ಪಾಡಾಗಿರತಕ್ಕ ಬ್ಯಾಕ್‌ವರ್ಡ್ ಕ್ಲಾಸ್ ಕಮಿಷನ್ನಿನವರ ತೀರ್ಮಾನವನ್ನೂ ಹೊರಬಿದ್ದಿಲ್ಲ. ಅದು ಹೊರಬಿದ್ದ ಹೊರತು ಈ ಹಿಂದುಳಿದ ಕೋಮುಗಳ ವರಿಗೂ ಮತ್ತು ನಿಮ್ಮ ಪಂಗಡದವರಿಗೂ ಖಚಿತವಾಗಿ ಯಾವ ನಿಯಮವನ್ನು ಅನುಸರಿಸಲಾಗುವುದೆಂಬು ದನ್ನು ಈಗಲೇ ಹೇಳುವುದಕ್ಕಾಗುವುದಿಲ್ಲ. ಆದಾಗ್ಯೂ ಈಗ ಶ್ರೀ ಮಾದಯ್ಯನವರ ನಿರ್ಣಯದಲ್ಲಿ ಏನು ತತ್ವ ಅಡಕವಾಗಿತೊ (ಆ ಪ್ರಕಾರವೇ ಪರಿಪಾಲನೆ ಮಾಡಬೇಕೆಂದು ಸೂಚನೆ ಕೊಡಲಾಗಿದೆ.

ಶ್ರೀ ಬಿ. ಹುಚ್ಚೇಗೌಡ.—ಈ ಸಂಬಂಧವಾಗಿ ಮುಂಚೆ ಯಾವ ರೀತಿ ಮಾಡಬೇಕೆಂಬ ಬಗ್ಗೆ ಅವರಿಂದ ಇನ್ನೂ ವರದಿ ಬಂದಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಬಂದಿಲ್ಲ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಎಲ್ಲಾ ನೌಕರಿಗಳ ಸ್ಥಾನಗಳನ್ನೂ ಭರ್ತಿ ಮಾಡುವಾಗ ನಿಮ್ಮ ಪಂಗಡದ ವರಿಗೆ ಶೇಕಡ 50ರಷ್ಟು ಸ್ಥಾನಗಳನ್ನು ಕೊಡ ಬೇಕೆಂದು ಮಾಡಿರತಕ್ಕ ಇಂಡಿಯಾ ಸರ್ಕಾರದವರ ಹುಕ್ಕುಂ ತಮ್ಮ ಗಮನಕ್ಕೆ ಇನ್ನೂ ಬಂದಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಈ ಬಗ್ಗೆ ತಮಗೇನೂ ಪತ್ರಿಕೆಗಳು ಬಂದಿಲ್ಲವೇ ?

Sri Kadidal MANJAPPA.—I am not aware of that report.

ಶ್ರೀ ಎಂ. ಚಿಕ್ಕಲಿಂಗಯ್ಯ.—ಎಷ್ಟು ಪರ್ಸೆಂಟನ್ನು ಈ ನಿಮ್ಮ ವರ್ಗದವರಿಗೆ ಫಿಕ್ಸ್‌ಮಾಡಬೇಕು, ಇವರಿಗೆ ಯಾವ ದಾವಾಷದಲ್ಲಿ ಪ್ರಾತಿನಿಧ್ಯ ಕೊಡಬೇಕು ಎಂಬೀ ವಿಚಾರಗಳ ಬಗ್ಗೆ ತಮಗೇನೂ ವರದಿಗಳು ಬಂದಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಅವರಿಗೆ ಸಾಕಾಗು ವಷ್ಟು ಪ್ರಾತಿನಿಧ್ಯ ದೊರೆಕುವಷ್ಟುಮಟ್ಟಿಗೆ ಒಂದು ಪರ್ಸೆಂಟೇಜನ್ನು ನಿರ್ಧರಿಸಬೇಕೆಂದು ಹೇಳಿದ್ದಾರೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—50-60 ನೌಕರಿ ಗಳನ್ನು ಭರ್ತಿಮಾಡುವಾಗಲೇನೋ ಪರವಾಇಲ್ಲ. ಆದರೆ ಇನ್ನುಳಿದ ಸಂದರ್ಭಗಳಲ್ಲಿ ಎಂದರೆ ಕೇವಲ 3-4 ಸ್ಥಾನಗಳನ್ನು ಭರ್ತಿಮಾಡತಕ್ಕ ಕಾಲದಲ್ಲಿ ಈ ಶೇಕಡ 16ಕ್ಕೆ ತಾವು ಹೇಗೆ ನಿರ್ಧಾರ ಮಾಡುತ್ತೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ಒಟ್ಟು ದಾಮಾಷಗಳ ಅಂದಾಜಿನ ಮೇಲೆ ಅದನ್ನು ನಿಗದಿಮಾಡಲಾಗುತ್ತದೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಇಂಡಿಯಾ ಸರ್ಕಾರದವರು ಈ ಬಗ್ಗೆ ಏನೊಂದು ನೀತಿಯನ್ನು ಕಾರ್ಯರೂಪಕ್ಕೆ ತಂದಿದ್ದಾರೋ ಅದರ ಪ್ರಕಾರವೇ ತಾವು ನಡೆಸಬೇಕಾಗಿದೆಯಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಹಾಗೆಯೇ ನಡೆಸ ಬೇಕೆಂಬ ನಿರ್ಬಂಧವೇನೂ ಇಲ್ಲ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಒಂದು ಹುಕುಮನ್ನು ಒಂದು ವರ್ಷ ಜಾರಿಗೆ ತಂದಮೇಲೆ, ಅದನ್ನು ಮತ್ತೊಂದು ವರ್ಷ ಜಾರಿಗೆ ಕೊಡದಿರಲು ಕಾರಣ ವೇನು ?

ಶ್ರೀ ಕಡಿದಾಳ್ ಮಂಜಪ್ಪ.—P. S. C. ಅವರಿಗೂ ಮತ್ತು ಇತರ ಎಲ್ಲಾ ಯೂನಿಟ್ ಆಫೀಸರುಗಳಿಗೂ

(ಶ್ರೀ ಕಡಿದಾಳ್ ಮಂಜಪ್ಪ.)

ಸರ್ಕಾರದವರು ಕೊಟ್ಟಿರತಕ್ಕಂಥ ಹುಕ್ಕುಂಗಳಿಗನುಸಾರವಾಗಿ ಚಾಚೂ ತಪ್ಪದೆ ನಡೆಸಿಕೊಂಡು ಬರಬೇಕೆಂದು ಅವರಿಗೆಲ್ಲಾ ತಿಳಿವಳಿಕೆ ಕೊಡಲಾಗಿದೆ; ಮತ್ತು ಹಾಗೆ ನಡೆಸಬೇಕೆಂಬ ಬಗ್ಗೆ ಒಂದು ಸರ್ಕಾರಿ ಹುಕುಮನ್ನೇ ಮಾಡಲಾಗಿದೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಈ ಹುಕುಮ್ಮಿಗನುಸಾರವಾಗಿ P. S. C. ಅವರು ಚಾಚೂ ತಪ್ಪದೆ ನಡೆಸಿಕೊಂಡು ಬರುತ್ತಿದ್ದಾರೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಈ ಹುಕುಮನ್ನು ಇತ್ತೀಚೆಗೆ ಹೊಸದಾಗಿ ಸಾದರು ಮಾಡಲಾಗಿದೆ.

Nonavinakere Tank Bund (necessity to widen).

Q.— 218. Sri T. G. THIMME GOWDA (Tiptur).—

Will the Government be pleased to state :—

(*a*) whether it is not a fact that the urgency of widening the tank-bund of Nonavinakere tank was brought to their notice and representations made as early as May 1952;

(*b*) whether it is not a fact that there was even a proposal mooted to divert the road (Tiptur-Turuvekere) by acquiring certain lands and a survey also made;

(*c*) whether any further measures have been taken to meet the urgency since then and if so, what are they;

d) whether they would undertake the work of widening the road on the bund at least during the current financial year?

A.—Sri Kadidal MANJAPPA (Minister for Revenue and Public Works).—

(*a*) Yes

(*b*) Yes.

(*c*) Yes. Estimates have been prepared both for widening the road on the tank bund and for deviating the road lower down the bund through the atchkat lands.

(*d*) The estimates are under scrutiny.

ಶ್ರೀ ಟಿ. ಜಿ. ತಿಮ್ಮೇಗೌಡ.—ನೊಣವಿನಕೆರೆಯ ಏರಿಯನ್ನು ಅಗಲ ಮಾಡತಕ್ಕ ಸಂಬಂಧದಲ್ಲಿ ತಯಾರಿಸಿರತಕ್ಕ ಅಂದಾಜಿದ ಮೊಬಲಗು ಎಷ್ಟು?

ಶ್ರೀ ಕಡಿದಾಳ್ ಮಂಜಪ್ಪ.—ಸುಮಾರು ಒಂದು ಲಕ್ಷ 29 ಸಾವಿರ ರೂಪಾಯಿಗಳು.

ಶ್ರೀ ಟಿ. ಜಿ. ತಿಮ್ಮೇಗೌಡ.—ಈ ವರ್ಷ ಕೆಲಸವನ್ನು ಪ್ರಾರಂಭಿಸಲು ಏಕೆ ಕಾರ್ಯಕ್ರಮಗಳನ್ನು ಕೈಗೊಳ್ಳಲಿಲ್ಲ?

ಶ್ರೀ ಕಡಿದಾಳ್ ಮಂಜಪ್ಪ.—ಆ ಎಸ್ಟಿಮೇಟನ್ನು ಇನ್ನೂ ಪರಿಶೀಲನೆ ಮಾಡಲಾಗುತ್ತಿದೆ. ಅದರಿಂದ ಕೆಲಸವನ್ನು ಪ್ರಾರಂಭಿಸಲು ಸಾಧ್ಯವಾಗಿಲ್ಲ.

ಶ್ರೀ ಟಿ. ಜಿ. ತಿಮ್ಮೇಗೌಡ.—ಮುಂದಿನ ಸಾಲಿನಲ್ಲಾದರೂ ತಾವು ಈ ಕೆಲಸವನ್ನು ಕೈಗೊಳ್ಳುವಿರಾ?

ಶ್ರೀ ಕಡಿದಾಳ್ ಮಂಜಪ್ಪ.—ಆ ವಿಚಾರವನ್ನು ನಾನು ಈಗ ನಿರ್ಧರವಾಗಿ ಹೇಳುವುದಕ್ಕಾಗುವುದಿಲ್ಲ.

Assistant Engineers (filling up of vacancies from 1944.)

Q.—430. Sri N. HUCHMASTHY GOWDA (Huliyurdurga).—

Will the Government be pleased to state :—

(*a*) the number of vacancies of Assistant Engineers from 1944 up-to-date;

(*b*) the number of supervsors promoted as Assistant Engineers from the year 1944;

(*c*) the number of probationers taken during this period;

(*d*) the number of supervisors now in charge of sub-divisions?

A.—Sri Kadidal MANJAPPA (Minister for Revenue and Public Works).—

(*a*) 119
(*b*) 115
(*c*) 61
(*d*) 23

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಅಸಿಸ್ಟೆಂಟ್ ಇಂಜಿನಿಯರುಗಳನ್ನು ಕೆಲಸಕ್ಕೆ ತೆಗೆದುಕೊಳ್ಳುವುದರ ಬಗ್ಗೆ ಹಿಂದೆ ಜಾರಿಮಾಡಲಾಗಿದ್ದ ಆಜ್ಞೆಯೇ ಈಗಲೂ ಜಾರಿಯಲ್ಲಿರುತ್ತದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಇದೆ. ಆದರೆ ಈ ಬಗ್ಗೆ ಮತ್ತೊಂದು ಹುಕುಮನ್ನು 1953ರಲ್ಲಿ ಹೊರಡಿಸಲಾಗಿದೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಈಗ ತಾವು ಹೊಸದಾಗಿ ಹೊರಡಿಸಿರುವಂಥ ಆಜ್ಞೆ ಸಹ ಹಿಂದಿನ ಆಜ್ಞೆಗೆ ಅನುಗುಣವಾಗಿಯೇ ಇದೆಯಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ತಾವು ಇಲ್ಲಿ (ಎ) ಪ್ರಶ್ನೆಗೆ ಉತ್ತರವಾಗಿ 119 ಸ್ಥಾನಗಳೆಂದು ಹೇಳಲಾಗಿದೆ. ಇಷ್ಟೇ ಸ್ಥಾನಗಳೋ ಅಥವಾ ಇನ್ನೂ ಏನಾದರೂ ಇದರಲ್ಲಿ ತಪ್ಪು ಬಿದ್ದಿದೆಯೋ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲಿ ಮುದ್ರಣ ದೋಷದಿಂದ 199 ಎಂಬುದಕ್ಕೆ ಬದಲಾಗಿ 119 ಎಂದು ತಪ್ಪಾಗಿ ಬಿದ್ದಿದೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಹೀಗೆ ಖಾಲಿ ಬಿದ್ದಿದ್ದ 199 ಸ್ಥಾನಗಳನ್ನು ಭರ್ತಿ ಮಾಡುವಾಗ ಇದರಲ್ಲಿ ಶೇಕಡಾ 5ರಿರಷ್ಟು ಸ್ಥಾನಗಳನ್ನು ಬಿಡಿಸಿಕೊಡುವುದರ ಮೂಲಕ ಭರ್ತಿಮಾಡಬೇಕೆಂದು ಹಿಂದಿನ ಸರ್ಕಾರಿ ಆಜ್ಞೆಯಲ್ಲಿ ಹೇಳಲಾಗಿದ್ದಿತಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು